ತಾರೀಖು 4ನೇ ಆಗಸ್ಟ್ 1903.

ನಂ. ರೆ. 433, ಕೋಲಾರ ಡಿಸ್ಟ್ರಿಕ್ಟಿಗೆ ಸೇರಿದ ಪ್ರೊಬೇಷನರಿ ಅಸಿಸ್ಟೆಂಟ್ ಕಮ್ಮಿಷನರಾದ ಮೆ|| ಹೆಚ್. ದಾಸಪ್ಪನವರು ಜನರಲ್ ಪ ರೆವಿನ್ಯೂ ಸೆಕ್ರಟೆರಿಯಟಿಗೆ ಹಂಗಾಮಿಯಾಗಿ ದಾಖಲ್ಮಾಡಲ್ಪಟ್ಟಿರುತ್ತಾರೆ.

2. ಜನರಲ್ ಪ ರೆವಿನ್ಯೂ ಸೆಕ್ರಟೆರಿಯಾಟನಲ್ಲಿ ಸ್ಪೆಷಲ್ ಕೆಲಸದಲ್ಲಿರುವ ಎಕ್ಸ್ಟ್ರಾ ಅಸಿಸ್ಟೆಂಟ್ ಕಮ್ಮಿಷನರಾದ ಮೆ|| ಬಿ. ರಾಮಕೃಷ್ಣರಾಯರು ಕೋಲಾರ ಡಿಸ್ಟ್ರಿಕ್ಟಿಗೆ ನೇಮಿಸಲ್ಪಟ್ಟಿರುತ್ತಾರೆ.

ತಾರೀಖು 4ನೇ ಆಗಸ್ಟ್ 1903.

ನಂ. ರೆ. 437, ಬೇರೆ ಕೆಲಸದಲ್ಲಿರುವ ಅಮಲ್ದಾರ್ರಾದ ಮೆ|| ಟಿ. ಧರ್ಮರಾಜ ಚಟ್ಟಿಯವರು ಅಮಲ್ದಾರ್ ಪ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಮಂಡ್ಯ ತಾಲ್ಲೂಕಿಗೆ ನೇಮಿಸಲ್ಪಟ್ಟಿರುತ್ತಾರೆ.

ಸೂಚನೆ. ಡಿಪ್ಲೊಮ ಕೆಲಸಕ್ಕೆ ದಾಖಲಾಗತಕ್ಕದ್ದು.

ಹುಕುಂ ಬಮೋಜೀಬ್,

ಹೆಚ್. ವಿ. ನಂಜುಂಡೈಯ್ಯ,

ಜನರಲ್ ಪ ರೆವಿನ್ಯೂ ಇಲಾಖೆಗಳ ಗವರ್ನ್ಮೆಂಟ್ ಸೆಕ್ರಟೆರಿ.

ಪಬ್ಲಿಕ್ ವರ್ಕ್ಸ್.

ಇನ್ಸ್ಟ್ರಾರ್ನಾಮಾ.

ತಾರೀಖು 28ನೇ ಜುಲೈ 1903.

ನಂ. 812-4006, ಮೈಸೂರು ಪಬ್ಲಿಕ್ ವರ್ಕ್ಸ್ ಇಲಾಖಾ ಇಂಜಿನಿಯರ್ ಸಿಬ್ಬಂದಿಯಲ್ಲಿ ಇದರಡೀ ಕಂಡ ಬಡ್ತಿಗಳು 1903ನೇ ಮೇ ಗುರ್ಯ್ ಲಾಗಾಯತು ಹುಕುಂ ಮಾಡಲ್ಪಟ್ಟಿರುತ್ತವೆ:—

ನಂ.	ಹೆಸರು.	ಹಾಲಿ ದರ್ಜೆ.	ಬಡ್ತಿ ಮಾಡಲ್ಪಟ್ಟ ದರ್ಜೆ.	ಬಡ್ತಿ ಸ್ವಭಾವ.	ಷರಾ.
1	ಮೆ|| ಕೆ. ಶ್ರೀನಿವಾಸಯ್ಯಂಗಾರ್ರು	3ನೇ ಕ್ಲಾಸ್ ಸಬ್ ಅಸಿಸ್ಟೆಂಟ್ ಇಂಜಿನಿಯರ್	2ನೇ ಕ್ಲಾಸ್ ಸಬ್ ಅಸಿಸ್ಟೆಂಟ್ ಇಂಜನಿಯರ್	ಹಂಗಾಮಿ	2ನೇ ಕ್ಲಾಸಿನಲ್ಲಿ ಖಾಲಿ ಬಿದ್ದಾಗ ಕೇರಿಸಿಕೊಳ್ಳತಕ್ಕದ್ದು
2	ಮೆ|| ಕೆ. ಆರ್. ಶೇಷಾಚಾರ್ರು	ಡಿಟೋ	ಡಿಟೋ	ಡಿಟೋ	ಡಿಟೋ
3	ಮೆ|| ಸಿ. ವಿಜಿಯರಂಗಂ ನಾಯಿಡು ಯವರು	ಡಿಟೋ	ಡಿಟೋ	ಡಿಟೋ	ಡಿಟೋ

ತಾರೀಖು 28ನೇ ಜುಲೈ 1903.

ನಂ. 813—4007, ಸ್ 1903ನೇ ಏಪ್ರೆಲ್ 3ನೇ ಮುಕ್ರುಂ 376—1930ನೇ ನಂಬರ್ ಮತ್ತು ಮೇ 18ನೇ ಮುಕ್ರುಂ 36-206ನೇ ನಂಬರಿ ಈ ಆಫೀಸ್ ಇನ್ಸ್ಟ್ರಾರ್ನಾಮೆಗಳಿಗೆ ಬದಲಾಗಿ ಮೆ|| ಎ. ಆನಂದಾಳ್ವರ್, ಬಿ. ಎ., ಎ. ಸಿ. ಇ. ಯವರು 1903ನೇ ಮೇ 1ನೇ ತಾರೀಖಿನ ಲಾಗಾಯತು ಮತ್ತು ಮೆ|| ಕೆ. ವಿ. ದೇಶಿಕಾಚಾರ್ಯ, ಎಲ್. ಸಿ. ಇ., ಯವರು ಮೇ 11ನೇ ತಾರೀಖಿನಾರಭ್ಯ ಮಾಹೆಯಾನಾ 100 ರೂಪಾಯಿಗಳ ತಲಬಿನಮೇಲೆ 2ನೇ ಕ್ಲಾಸ್ ಹಂಗಾಮಿ ಸಬ್ ಅಸಿಸ್ಟೆಂಟ್ ಇಂಜಿನಿಯರುಗಳಾಗಿ ನೊಕರರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 31ನೇ ಜುಲೈ 1903.

ನಂ. 833—4097, ಹಾಸನ ಡಿವೀಜನ್ನಿಗೆ ಕೇಂದ ಸಬ್ ಅಸಿಸ್ಟೆಂಟ್ ಇಂಜಿನಿಯರಾದ ಮೆ|| ನಿಜಗಲ್ ವೆಂಕಟರಾಯರಿಗೆ ಮಾಹೆ ಮಜಕೂರು 25ನೇ ತಾರೀಖಿನಾರಭ್ಯ ಯಾ ಅವರು ಉಸಯೋಗಿಸಿಕೊಳ್ಳುವ ತಾರೀಖಿನ ಲಾಗಾಯಿತು ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,

ಡಬ್ಲ್ಯೂ. ಮುಕ್ಹರ್ಜೀ,

ಪಬ್ಲಿಕ್ ವರ್ಕ್ಸ್ ಇಲಾಖಾ ಮೈಸೂರ ಗವರ್ನ್ಮೆಂಟ್ ಸೆಕ್ರಟೆರಿ.

ಫಾರೆಸ್ಟ್.

ಇನ್ಸ್ಟ್ರಾರ್ನಾಮಾ.

ತಾರೀಖು 29ನೇ ಜುಲೈ 1903.

ನಂ. 72—879, ಸ್ 1903ನೇ ಜುಲೈ 11ನೇ ಮುಕ್ರುಂ 44-5—374—5ನೇ ನಂಬರ್ ಗವರ್ನ್ಮೆಂಟ್ ಪ್ರೊಸೀಡಿಂಗ್ಸಿನಲ್ಲಿ ಕರ್ನಸರ್ವ್ಯೇಟರವರಿಗೆ ಹೆಡ್‌ಕ್ವಾರ್ಟರ್ ಅಸಿಸ್ಟೆಂಟ್ ಮತ್ತು ಫಾರೆಸ್ಟ್ ಇಲಾಖಾ ಗವರ್ನ್ಮೆಂಟ್ ಅಸಿಸ್ಟೆಂಟ್ ಸೆಕ್ರಟೆರಿಯವರಾದ ಮೆ|| ಜಿ. ಇ. ರಿಕ್ಕೆಟ್ಟ್ಸ್ ಯವರಿಗೆ ಕೊಟ್ಟಿದ್ದ 5 ದಿನಗಳ ಕ್ಯಾಜುಯಲ್ ರಜಾ ಇನ್ನೂ ಎರಡು ದಿನಗಳು ಜಾಸ್ತಿ ಮಾಡಲ್ಪಟ್ಟು, ವಿಸ್ತೃತ ರಜಾಕಾಲ ಅಂದರೆ, 7 ದಿನಗಳು ಮೈಸೂರ ಸರ್ವಿಸ್ ರೆಗ್ಯುಲೇಷ್ಗಳ 188ನೇ ಆರ್ಟಿಕಲ್ ಅನುಸರಿಸಿ ಪ್ರಿವಿಲೀಜ್ ರಜಾ ಆಗಿ ಎಣಿಸಲ್ಪಡತಕ್ಕದ್ದು.

ಹುಕುಂ ಬಮೋಜೀಬ್,

ಎಂ ಮುತ್ತಣ್ಣ,

ಫಾರೆಸ್ಟ್ ಇಲಾಖಾ ಗವರ್ನ್ಮೆಂಟ್ ಆಫೀಷಿಯೇಟಿಂಗ್ ಸೆಕ್ರಟೆರಿ.